

ಡಾ. ಎಸ್. ರಾಮಮೂರ್ತಿ

# 6-4-2017ರಿಂದ 12-4-2017ರವರೆಗೆ



**ಮೇಷ**

ವಾರದ ಆರಂಭದಲ್ಲಿ ಒತ್ತಡ. ವಿರೋಧಿಗಳಿಂದ ತೊಂದರೆ. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ವಾಹನಗಳಿಂದ ಖರ್ಚು. ವಾರದ ಮಧ್ಯಭಾಗದಿಂದ ಅನುಕೂಲ. ಅಭಿವೃದ್ಧಿ. ಶ್ರಮವಿಲ್ಲದೆ ಕಾರ್ಯಸಿದ್ಧಿ. ವ್ಯಾಪಾರದಲ್ಲಿ ಸೂಕ್ತ ಲಾಭ. ಆತ್ಮಬಲ ಹೆಚ್ಚುವುದು. ಕುಟುಂಬದ ಸದಸ್ಯರಲ್ಲಿ ಮನಸ್ತಾಪ ದೂರವಾಗುವುದು. ಶುಭ ದಿನ: 9; ಲಕ್ಷ್ಮಿ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ



**ವೃಷಭ**

ವಾರದ ಆರಂಭದಲ್ಲಿ ಚಂಚಲತೆ. ಅಕಾಲ ಭೋಜನ. ವೃತ್ತಿ ವ್ಯವಹಾರಗಳಲ್ಲಿ ಒತ್ತಡ. ಆರೋಗ್ಯ ವ್ಯತ್ಯಯ. ವಾರದ ಮಧ್ಯ ಭಾಗದಿಂದ ಚೇತರಿಕೆ. ಮನೋಬಲ ಹೆಚ್ಚುವುದು. ಉದ್ಯೋಗದಲ್ಲಿ ಮುನ್ನಡೆ. ಕ್ರಯ ವಿಕ್ರಯಗಳಲ್ಲಿ ನಿರೀಕ್ಷಿತ ಲಾಭ. ಗುರು ಹಿರಿಯರಿಂದ ಮಾರ್ಗದರ್ಶನ. ವಸ್ತ್ರಾಭರಣ ಖರೀದಿ ಯೋಜನೆ. ಶುಭ ದಿನ: 10; ಗಣೇಶ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ



**ಮಿಥುನ**

ವಾರದ ಆರಂಭದಲ್ಲಿ ಅನುಕೂಲ. ಕೆಲಸ ಕಾರ್ಯಗಳಲ್ಲಿ ನಿರೀಕ್ಷಿತ ಫಲ. ವ್ಯಾಪಾರ ವ್ಯವಹಾರಗಳಲ್ಲಿ ಲಾಭ. ಸಂದೇಶಗಳಿಂದ ಸಂತಸ. ವಾರದ ಮಧ್ಯಭಾಗದಲ್ಲಿ ಆತಂಕ. ವಸ್ತುಗಳು ಕೈಯಿಂದ ಜಾರಿ ಬೀಳುವ ಸಾಧ್ಯತೆ. ವಿರೋಧಿಗಳಿಂದ ಉಪದ್ರವ. ವೃತ್ತಿ ಪ್ರವೃತ್ತಿಗಳಲ್ಲಿ ಒತ್ತಡ. ಕುಟುಂಬದ ಸದಸ್ಯರಲ್ಲಿ ಭಿನ್ನಾಭಿಪ್ರಾಯ. ಶುಭ ದಿನ: 7; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ



**ಕಟಕ**

ಹಿಂದಿನ ಕೆಲವು ಸಮಸ್ಯೆಗಳಿಗೆ ಪರಿಹಾರ ದೊರೆಯುವುದು. ಉದ್ಯೋಗ ವೃತ್ತಿಗಳಲ್ಲಿ ಮನಃಶಾಂತಿ ಲಭಿಸುವುದು. ಕ್ರಯ ವಿಕ್ರಯಗಳಲ್ಲಿ ನಿರೀಕ್ಷಿತ ಲಾಭ ಪ್ರಾಪ್ತಿಯಾಗುವುದು. ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು. ವಿರೋಧಿಗಳು ತಟಸ್ಥರಾಗುವರು. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ಶುಭ ದಿನ: 9; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ



**ಸಿಂಹ**

ವಾರದ ಆರಂಭದಲ್ಲಿ ಸೋಮಾರಿತನ. ಸಮಯಕ್ಕೆ ಸರಿಯಾಗಿ ಕೆಲಸ ಕಾರ್ಯಗಳಿಗೆ ಹಾಜರಾಗುವುದಿಲ್ಲ. ವ್ಯಾಪಾರದಲ್ಲಿ ಹಿನ್ನಡೆ. ಆರೋಗ್ಯ ವ್ಯತ್ಯಯ. ವಾರದ ಮಧ್ಯಭಾಗದಿಂದ ಮನಃಶಾಂತಿ, ಧೈರ್ಯ. ಉದ್ಯೋಗದಲ್ಲಿ ಪ್ರಗತಿ. ಲೇವಾದೇವಿಗಳಲ್ಲಿ ನಿರೀಕ್ಷಿತ ಲಾಭ. ಶುಭ ಕಾರ್ಯ ಯೋಜನೆ. ಪತ್ರಾಗಮನ. ಶುಭ ದಿನ: 10; ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಕನ್ಯಾ**

ವಾರದ ಆರಂಭದಲ್ಲಿ ಅನುಕೂಲ. ಶ್ರಮವಿಲ್ಲದೆ ಕಾರ್ಯ ಸಿದ್ಧಿ. ವ್ಯಾಪಾರದಲ್ಲಿ ಲಾಭ. ಹಿರಿಯರಿಂದ ಸಹಾಯ. ವಾರದ ಮಧ್ಯ ಭಾಗದಲ್ಲಿ ಒತ್ತಡ. ಲೆಕ್ಕಪತ್ರಗಳಲ್ಲಿ ತಪ್ಪುಗಳಾಗುವಿಕೆ. ವೃತ್ತಿ ವ್ಯವಹಾರಗಳಲ್ಲಿ ಅಶಾಂತಿ. ಕುಟುಂಬ ಸದಸ್ಯರಲ್ಲಿ ಭಿನ್ನಾಭಿಪ್ರಾಯ. ವಾಹನಗಳು ದುರಸ್ಥಿಗೆ ಬರುವ ಸಾಧ್ಯತೆ. ವಾರಾಂತ್ಯ ಸುಧಾರಣೆ. ಶುಭ ದಿನ: 7; ದುರ್ಗಾ ಮತ್ತು ಗುರು ಅಷ್ಟೋತ್ತರ ಪಠಿಸಿ



**ತುಲಾ**

ವಾರದ ಮಧ್ಯ ಭಾಗದವರೆಗೂ ಸುಖ ಸೌಖ್ಯ. ನಿರೀಕ್ಷೆಯಂತೆ ಕಾರ್ಯ ಸಿದ್ಧಿ. ಕ್ರಯ ವಿಕ್ರಯಗಳಲ್ಲಿ ನಿರೀಕ್ಷಿತ ಲಾಭ. ಪ್ರೀತಿ ಪಾತ್ರರೊಂದಿಗೆ ಸಮಾಲೋಚನೆ. ಸಂಘ ಸಂಸ್ಥೆಗಳಿಂದ ಸಹಾಯ. ವಾರಾಂತ್ಯದಲ್ಲಿ ಆಲಸ್ಯ. ನಿರ್ಧಾರಗಳನ್ನು ತೆಗೆದು ಕೊಳ್ಳಲು ಹಿಂಜರಿತ. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ಶುಭ ದಿನ: 9; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ



**ವೃಶ್ಚಿಕ**

ಕೆಲಸ ಕಾರ್ಯಗಳು ನಿರೀಕ್ಷೆಯಂತೆ ನಡೆಯುವುದು. ವ್ಯಾಪಾರ ವಹಿವಾಟುಗಳಲ್ಲಿ ಲಾಭ ವೃದ್ಧಿಯಾಗುವುದು. ಆಪ್ತರಿಂದ ಸಹಾಯ ದೊರೆಯುವುದು. ಹಿಂದಿನ ತಂಟೆ ತಕರಾರುಗಳು ಬಗೆಹರಿಯುವುದು. ಕೋಪ ಕಡಿಮೆಯಾಗುವುದು. ಹಣದ ವಿಚಾರದಲ್ಲಿನ ಮನಸ್ತಾಪ ದೂರವಾಗುವುದು. ಹಿತಕರ ಘಟನೆಗಳಿಂದ ಸಂತಸ. ಶುಭ ದಿನ: 10, ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಧನಸ್ಸು**

ವಾರದ ಆರಂಭದಲ್ಲಿ ಏನಾದರೊಂದು ಸಮಸ್ಯೆ. ಕುಟುಂಬ ಸದಸ್ಯರಿಂದ ಅಸಹಾಕಾರ. ವೃತ್ತಿ ಪ್ರವೃತ್ತಿಗಲ್ಲಿ ಒತ್ತಡ. ಅಕಾಲ ಭೋಜನ. ವಾರದ ಮಧ್ಯಭಾಗದಿಂದ ಅನುಕೂಲ. ಶ್ರಮವಿಲ್ಲದೆ ಕಾರ್ಯಸಿದ್ಧಿ. ಲೇವಾದೇವಿಗಳಲ್ಲಿ ಲಾಭ. ದೈವೀಕತೆಯಲ್ಲಿ ದೃಢ ಮನಸ್ಸು. ಪ್ರಯಾಣದಲ್ಲಿ ನಿರಾತಂಕ. ಬರಬೇಕಾದ ಹಣ ಬರುವುದು. ಶುಭ ದಿನ: 10; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ



**ಮಕರ**

ವಾರದ ಆರಂಭದಲ್ಲಿ ಒತ್ತಡ. ವಸ್ತುಗಳು ಕೈಯಲ್ಲಿ ಜಾರಿ ಬೀಳುವ ಸಂಭವ. ಅಕಾಲ ಭೋಜನ. ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ವಾರದ ಮಧ್ಯ ಭಾಗದಿಂದ ಪ್ರಗತಿ. ಮನೋಬಲ ಹೆಚ್ಚುವುದು. ಉದ್ಯೋಗದಲ್ಲಿ ಮುನ್ನಡೆ. ಲೇವಾದೇವಿಗಳಲ್ಲಿ ಲಾಭ. ಆತ್ಮೀಯರ ಆಗಮನ. ಆಟಪಾಠಗಳಲ್ಲಿ ಮೇಲುಗೈ. ಹಿತಕರ ಸಂದೇಶ. ಶುಭ ದಿನ: 10; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ



**ಕುಂಭ**

ವಾರದ ಆರಂಭದಲ್ಲಿ ಸಮಾಧಾನ. ಸೌಖ್ಯ, ಕ್ರಮವಿಲ್ಲದೆ ಕಾರ್ಯ ಸಾಧನೆ. ಲೇವಾದೇವಿಗಳಲ್ಲಿ ಲಾಭ. ವಾರದ ಮಧ್ಯ ಭಾಗದಲ್ಲಿ ಚಂಚಲ ಮನಸ್ಸು. ಮೋಸ ಹೋಗುವ ಸಂಭವ. ಅನಾರೋಗ್ಯ. ವೃತ್ತಿ ವ್ಯವಹಾರಗಳಲ್ಲಿ ಏನಾದರೊಂದು ಸಮಸ್ಯೆ. ಹಿರಿಯರ ಮೇಲೆ ಕೋಪ ತಾಪ. ನಿದ್ರಾಭಂಗ. ವಾರಾಂತ್ಯ ಅನುಕೂಲ. ಶುಭ ದಿನ: 7; ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಮೀನ**

ಉದ್ಯೋಗ ವೃತ್ತಿ ವ್ಯವಹಾರಗಳಲ್ಲಿ ಪ್ರಗತಿ. ಕ್ರಯ ವಿಕ್ರಯಗಳಲ್ಲಿ ಪೈಪೋಟಿಯಿದ್ದರೂ ಲಾಭ ದೊರಕುವುದು. ಆಪ್ತರಿಂದ ಸಹಾಯ ಲಭಿಸುವುದು. ಗುರು ಹಿರಿಯರೊಂದಿಗಿನ ಸಮಾಲೋಚನೆ ಧೈರ್ಯ ಮೂಡಿಸುವುದು. ದೀರ್ಘಕಾಲದ ಸ್ನೇಹಿತರ ಭೇಟಿಯಿಂದ ಸಂತಸವಾಗುವುದು. ಸೇವಾ ಕಾರ್ಯದಲ್ಲಿ ಆಸಕ್ತಿ. ಶುಭ ದಿನ: 10; ದುರ್ಗಾ ಮತ್ತು ಶಿವ ಅಷ್ಟೋತ್ತರ ಪಠಿಸಿ.